ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಃ ನ್ಯಾಯಾಲಯ, ಮದ್ದೂರು

ಸಿಸಿ 1209/2024

| | | |
|---|---|---|
| ಸಾಕ್ಷಿದಾರರ ಹೆಸರು | - ಪ್ರಕಾಶ್ | ಚಾಸಾ-3 |
| ತಂದೆಯ ಹೆಸರು | - ರಾಜು ಎಸ್ ಕೆ | ಫ್ರಾಸಾ-2 |
| ವಯಸ್ಸು | - 45 ವರ್ಷ | |
| ಉದ್ಯೋಗ | - ವ್ಯವಸಾಯ | |
| ವಾಸಸ್ಥಳ | - ಸಾದೊಳಲು | |

ದಿನಾಂಕಃ- 28-08-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಅಭಿಯೋಜನೆಯ ಪರಃ ಎಪಿಪಿ ರವರಿಂದಃ-**

ಚಾಸಾ-1 ರವರು ನನ್ನ ತಾಯಿ, ಅವರು ಈಗ ಮೃತಪಟ್ಟಿರುತ್ತಾರೆ, ಚಾಸಾ-2 ರವರು ನನ್ನ ತಂದೆ, ಚಾಸಾ-4 ರವರು ನನ್ನ ತಮ್ಮ, ಚಾಸಾ-5 ರಿಂದ 7 ರವರ ಪರಿಚಯವಿರುತ್ತದೆ. ಆರೋಪಿತರು ನಮ್ಮ ಸಂಬಂಧಿಕರು. ದಿ 18-05-2024 ರಂದು ಬೆಳಗ್ಗೆ 10.00 ಗಂಟೆ ಸಮಯದಲ್ಲಿ ಚಾಸಾ-1 ರವರು ಕೊಟ್ಟಿಗೆಯನ್ನು ತೊಳೆಯುತ್ತಿದ್ದರು. ಆಗ ಆರೋಪಿ 1 ಮತ್ತು 2 ರವರು ನಮ್ಮ ಜಾಗಕ್ಕೆ ನೀರು ಬರುತ್ತದೆ ಎಂದು ಜಗಳಕ್ಕೆ ಬಂದಿರುತ್ತಾರೆ. ಆಗ ಚಾಸಾ-1 ರವರು ನಾವು ತೊಳೆದ ಕೊಟ್ಟಿಗೆ ನೀರು ನಮ್ಮ ಜಾಗದಲ್ಲಿ ಹೋಗುತ್ತದೆ ಯಾಕೆ ಗಲಾಟೆ ಮಾಡುತ್ತಿದ್ದೀರಿ ಎಂದು ಚಾಸಾ-1 ಮತ್ತು ಚಾಸಾ-2 ರವರು ಕೇಳಿರುತ್ತಾರೆ. ಆಗ ಆರೋಪಿಯು ನನ್ನ ತಾಯಿಯಾದ ಚಾಸಾ-1 ರವರ ಸೀರೆಯನ್ನು ಹರಿದು ಹಾಕಿರುತ್ತಾರೆ. ಆರೋಪಿ 1, 2 ರವರು ಕಲ್ಲಿನಿಂದ, ಕೈಯಿಂದ ಚಾಸಾ-1 ರವರಿಗೆ ಹೊಡೆದಿರುತ್ತಾರೆ. ಮೂ ಮಾಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಈ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ. ಆರೋಪಿತರನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಎಪಿಪಿ ಯವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ-**

ಆರೋಪಿತರು ಏಕಾಏಕಿ ನಿಮ್ಮ ಕೊಟ್ಟಿಗೆ ಜಾಗಕ್ಕೆ ನುಗ್ಗಿರುತ್ತಾರೆಂದರೆ ಸರಿ. 1 ನೇ ಆರೋಪಿಯು ಚಾಸಾ-1 ರವರಿಂದ ಅವಾಚ್ಯವಾಗಿ ಬೈದು, ಹೊಡೆದಿರುತ್ತಾರೆಂದರೆ ಸರಿ. ಆಗ ನಮ್ಮ ತಾಯಿಯಾದ ಚಾಸಾ-1 ರವರು ಕಿರುಚುವುದನ್ನು ಕೇಳಿಸಿಕೊಂಡು ನಾವೆಲ್ಲ ಬಂದಿರುತ್ತೇವೆಂದರೆ ಸರಿ. 3 ನೇ ಆರೋಪಿಯು ಕಾಲಿನಿಂದ ಚಾಸಾ-1 ರವರ ಎದೆಗೆ ಒದ್ದಿದ್ದುತ್ತಾರೆಂದರೆ ಸರಿ. ಚಾಸಾ-4 ರವರಿಗೂ 3 ನೇ ಆರೋಪಿಯು ಕೈಯಿಂದ ಮತ್ತು ಕಾಲಿನಿಂದ ಹೊಡೆದಿರುತ್ತಾರೆಂದರೆ ಸರಿ. ನನಗೂ ಸಹ ಆರೋಪಿ 1, 2 ರವರು ಅವರ ಕತ್ತಿನ ಪಟ್ಟಿ ಹಿಡಿದು ಹೊಡೆದಿರುತ್ತಾರೆಂದರೆ ಸರಿ. ನಂತರ ಆರೋಪಿ

3 ರವರು ಮತ್ತೊಮ್ಮೆ ನಮ್ಮ ಮನೆಯ ಬಳಿ ನೀರು ಬಿಟ್ಟರೆ ಕೊಲೆ ಬೆದರಿಕೆ ಹಾಕಿದ್ದಾರೆಂದರೆ ಸರಿ. ನಂತರ ಚಾಸಾ-5 ರಿಂದ 7 ರವರು ಸ್ಥಳಕ್ಕೆ ಬಂದು ಜಗಳ ಬಿಡಿಸಿರುತ್ತಾರೆಂದರೆ ಸರಿ. ಆರೋಪಿತರು ಅಲ್ಲಿಂದ ಹೋಗುವಾಗ ರಸ್ತೆಯಲ್ಲಿದ್ದ ಕಲ್ಲುಗಳನ್ನು ಎತ್ತಿಕೊಂಡು ನಮ್ಮ ಮನೆಯ ಮೇಲೆ ಎಸೆದರು ಎಂದರೆ ಸರಿ.

**<u>ಪಾಟೀ ಸವಾಲುಃ ಆರೋಪಿತರ ಪರ ಮಾನ್ಯ ಶ್ರೀ.ಎಂಎಂಪಿ ವಕೀಲರಿಂದಃ-</u>**

ಚಾಸಾ-1 ರವರು ನನ್ನ ತಾಯಿ, ಚಾಸಾ-2 ರವರು ನನ್ನ ತಂದೆ, ಚಾಸಾ-4 ರವರು ನನ್ನ ತಮ್ಮ. ಆರೋಪಿತರು ನಮ್ಮ ಸಂಬಂಧಿಕರಾಗಬೇಕು. ಊರಿನ ಮುಖ್ಯ ರಸ್ತೆಯಲ್ಲಿ ಮೊದಲು ನಮ್ಮ ಮನೆ ಇರುತ್ತದೆ, ನಂತರ ರಾಜಣ್ಣ ರವರ ಮನೆ ಬರುತ್ತದೆ. ನಂತರ ಆರೋಪಿತರ ಮನೆ ಇರುತ್ತದೆ. ನಮ್ಮ ಮನೆಯ  ಮುಂದಿನ ಕಾಪೌಂಡ್ ರಾಜಣ್ಣ ರವರಿಗೆ ಸೇರಿರುತ್ತದೆ. ನಮ್ಮ ಮತ್ತು ರಾಜಣ್ಣ ರವರ ಮನೆಯ  ಮಧ್ಯೆ ರಾಜಣ್ಣ ರವರ ಮನೆ ಇದೆ ಎಂದರೆ ಸರಿ. ಆ ರಸ್ತೆ ನಮ್ಮ ಮನೆ ಮತ್ತು ಮುಖ್ಯ ರಸ್ತೆಗೆ ಹೊಂದಿಕೊಂಡಂತೆ ಇರುತ್ತದೆ ಎಂದರೆ ಸರಿಯಲ್ಲ. ಆರೋಪಿತರು ಆ ರಸ್ತೆಯ ಮೂಲ.ವೇ ಮುಖ್ಯ ರಸ್ತೆಗೆ  ಹೋಗುತ್ತಾರೆಂದರೆ ಸರಿಯಲ್ಲ. ರಾಜಣ್ಣ ರವರ ರಸ್ತೆ ಮುಖ್ಯ ರಸ್ತೆಗೆ ಸಂಪರ್ಕ ಇಲ್ಲ ಎಂದರೆ ಸರಿಯಲ್ಲ. ಆರೋಪಿತರು ಅದೇ ರಸ್ತೆಯ ಮೂಲಕವೇ ತಿರುಗಾಡುತ್ತಾರೆ. ಮನೆಗೆ ಸಂಬಂಧಪಟ್ಟಂತೆ ಸಿವಿಲ್ ವ್ಯಾಜ್ಯ ಇದೆ ಎಂದರೆ ಸರಿ. ಆರೋಪಿತರಿಗೆ ವಿನಾಃ ಕಾರಣ ನಾವೇ ತೊಂದರೆ ಕೊಡುತ್ತಿದ್ದೇವೆಂದರೆ ಸರಿಯಲ್ಲ. ರಸ್ತೆಯ ವಿಚಾರವಾಗಿ ಆರೋಪಿತರು ಪಂಚಾಯಿತಿಗೆ ದೂರು ನೀಡಿದ್ದರು ಎಂದರೆ ಸರಿಯಲ್ಲ. ಪಂಚಾಯಿತಿಯವರು ನಮಗೆ ನೋಟೀಸ್ ನೀಡಿ ರಸ್ತೆಗೆ ತಕರಾರು ಮಾಡಿದ್ದಾರೆಂದರೆ ಸರಿಯಲ್ಲ. ಆದರೂ ಸಹ ನಾವು ತಕರಾರು ಮಾಡುತ್ತಿದ್ದೇವೆಂದರೆ ಸರಿಯಲ್ಲ. ನಾವು ಉದ್ದೇಶಪೂರ್ವಕವಾಗಿ ನಮ್ಮ ಸ್ನಾನದ ಮನೆಯ ನೀರನ್ನು ರಸ್ತೆಗೆ ಬಿಡುತ್ತಿದ್ದೇವು ಎಂದರೆ ಸರಿಯಲ್ಲ. ಆರೋಪಿತರಿಗೆ  ತೊಂದರೆ ಕೊಡುವ ಉದ್ದೇಶದಿಂದ ದನಕರುಗಳನ್ನು ರಸ್ತೆಗೆ ಕಟ್ಟುತ್ತಿದ್ದೇವು ಎಂದರೆ ಸರಿಯಲ್ಲ. ಏಕಾಏಕಿ ನಾವೇ ಆರೋಪಿತರ ವಿರುದ್ಧ ಗಲಾಟೆ ಮಾಡಿರುತ್ತೇವೆಂದರೆ ಸರಿಯಲ್ಲ. ನಾವು ವಿನಾಃ ಕಾರಣ ರಸ್ತೆಯಲ್ಲಿ ದನ ಕರುಗಳನ್ನು ಕಟ್ಟಿ  ಆರೋಪಿತರಿಗೆ ತೊಂದರೆ ಕೊಡುತ್ತಿದ್ದೇವೆಂದರೆ ಸರಿಯಲ್ಲ. ಸದರಿ ಜಾಗ ನಮ್ಮದೇ ಎಂದು ನುಡಿಯುತ್ತಾರೆ. ಆರೋಪಿತರಿಗೆ ತಿರುಗಾಡುವ ದಾರಿಗೆ ನಾವು ತೊಂದರೆ ಕೊಟ್ಟಿದ್ದು, ಅದನ್ನು ಕೇಳಲು ಬಂದಾಗ ನಾವೇ ಆರೋಪಿತರಿಗೆ ತೊಂದರೆ ಕೊಟ್ಟಿದ್ದೆವೆಂದರೆ ಸರಿಯಲ್ಲ. ನಮ್ಮ ಮತ್ತು ಆರೋಪಿತರ ಮಧ್ಯೆ ಮಾತುಕತೆ ಇಲ್ಲ ಎಂದರೆ ಸರಿ. ಈ ದೂರು ದಾಖಲು ಮಾಡಿ ಸಿವಿಲ್ ವ್ಯಾಜ್ಯವನ್ನು ವಾಪಸ್ಸು ಪಡೆಯುವಂತೆ ಆರೋಪಿತರಿಗೆ ದಮಕಿ ಹಾಕುತ್ತಿದ್ದೇವೆಂದರೆ ಸರಿಯಲ್ಲ. ಆರೋಪಿತರು ನಮ್ಮ ವಿರುದ್ಧ ಸಿವಿಲ್ ಪ್ರಕರಣ ದಾಖಲು ಮಾಡಿದ್ದಾರೆಂದರೆ ಸರಿ. ಆರೋಪಿತರು  ಸಿವಿಲ್ ದಾಖಲು ಮಾಡಿದ ನಂತರ ವಿನಾಃ ಕಾರಣ ನೀವು ಅವರಿಗೆ ತೊಂದರೆ ಮಾಡುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿತರು ರಸ್ತೆಯಲ್ಲಿ ದನ ಕಟ್ಟಿರುವ

ವಿಚಾರವಾಗಿ ಕೇಳಲು ಬಂದಾಗ ನಾವೇ ಜಗಳ ತೆಗೆದು ಆರೋಪಿತರಿಗೆ ಹಲ್ಲೆ ಮಾಡಿರುತ್ತೇವೆಂದರೆ ಸರಿಯಲ್ಲ. ಈ ಸಂಬಂಧ ಆರೋಪಿತರು ನಮ್ಮ ವಿರುದ್ಧ ದೂರು ಕೊಟ್ಟಿದ್ದರು ಎಂದರೆ ಸರಿ. ಘಟನೆ ನಡೆದ 5 ದಿನಗಳ ನಂತರ ಉದ್ದೇಶಪೂರ್ವಕವಾಗಿ ಆರೋಪಿತರ ವಿರುದ್ಧ ಸುಳ್ಳು ದೂರನ್ನು ದಾಖಲಿಸಿದ್ದೀರಿ ಎಂದರೆ ಸರಿಯಲ್ಲ. ನನ್ನ ಅಣ್ಣನ ವಿರುದ್ಧವೂ ಸಹ ಕ್ರಿಮಿನಲ್ ಪ್ರಕರಣ ದಾಖಲಾಗಿತ್ತು ಎಂದರೆ ಸರಿ.

ನಾವುಗಳೆಲ್ಲ ಆರೋಪಿತರಿಗೆ ಹೊಡೆದು, ಅವರಿಗೆ ಅವಮಾನ ಮಾಡಿದ್ದೇವೆಂದರೆ ಸರಿಯಲ್ಲ. ಆ ವಿಚಾರವಾಗಿ ಮದ್ದೂರು ಪೊಲೀಸರಿಗೆ ಆರೋಪಿತರು ನಮ್ಮ ವಿರುದ್ಧ ದೂರು ನೀಡಿದ್ದಾರೆಂದರೆ ಸರಿ, ಸುಳ್ಳು ದೂರು ನೀಡಿದ್ದಾರೆಂದು ನುಡಿಯುತ್ತಾರೆ. ಅವರುಗಳು ನೀಡಿದ ದೂರಿಗೆ ವಿರುದ್ಧವಾಗಿ ಈ ದೂರನ್ನು ಅವರ ಮೇಲೆ ನೀಡಿದ್ದೆನೆಂದರೆ ಸರಿಯಲ್ಲ. ಆರೋಪಿತರು ಆ ದಿನ ಯಾವುದೇ ಗಲಾಟೆ ಮಾಡಿಲ್ಲ, ನಮ್ಮ ಮನೆಯ ಕೊಟ್ಟಿಗೆಯ ಬಳಿ ಬಂದಿಲ್ಲ, ಚಾಸಾ-1 ರವರ ಸೀರೆಯನ್ನು ಹರಿದು ಹಾಕಿಲ್ಲ, ಹಲ್ಲೆ ಮಾಡಿಲ್ಲ, ಅವಾಚ್ಯವಾಗಿ ಬೈದಿಲ್ಲ, ಕೊಲೆ ಬೆದರಿಕೆ ಹಾಕಿಲ್ಲ, ಕತ್ತಿನಪಟ್ಟಿ ಹಿಡಿದು ಹೊಡೆದಿಲ್ಲ, ಕಾಲಿನಿಂದ ಒದ್ದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಹೇಳಿಕೆಯನ್ನು ಪೊಲೀಸರಿಗೆ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಹೇಳುವ ರೀತಿ ಯಾವುದೇ ಘಟನೆ ನಡೆಯದೇ ಇದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಎರಡನೇ ಅಪರ ಸಿವಿಲ್ ಮತ್ತು ಜೆಎಂಎಫ್,ಸಿ,
ನ್ಯಾಯಾಧೀಶರು, ಮದ್ದೂರು.

ಸಾಕ್ಷಿಯ ಸಹಿಃ